ಮತ್ತು ವಿಧಾನಸಭೆ ಸರ್ಜಿತಗೊಂಡ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ಕಾರಣ ಸದರಿ ತಾಲ್ಲೂಕು ಮಟ್ಟದಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಮಿತಿಯ ಕಾರ್ಯ ಸ್ಥಗಿತಗೊಳಿಸಲಾಗಿತ್ತು. ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 36 ಎಲ್‌ಜಿಪಿ 2004ರ ದಿ:3.9.2004ರ ರಾಜ್ಯದಲ್ಲಿನ ಈ ಹಿಂದೆ ತಾಲ್ಲೂಕು ಮಟ್ಟದಲ್ಲಿನ ಎಲ್ಲಾ ಬಗರ್ ಹುಕುಂ ಸಾಗುವಳಿ ಸಮಿತಿಗಳನ್ನು ಪುನರ್ ರಚಿಸಿ ಹೊರಡಿಸಿದ ಎಲ್ಲಾ ಅಧಿಸೂಚನೆಗಳನ್ನು ಹಿಂತೆಗೆದು ಆದೇಶಿಸುತ್ತಾ, ಬಗರ್ ಹುಕುಂ ಸಮಿತಿಗಳನ್ನು ರಚಿಸಲು ಹೊಸ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳು ಬಂದಿದ್ದು ಅವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಅ) ಭಾಗದಲ್ಲಿ ಉತ್ತರಿಸಲಾಗಿದೆ.

ಇ) ಚುನಾವಣೆಗಳನ್ನು ಘೋಷಿಸಿದ್ದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಹಿಂದೆ ರಚಿಸಲಾಗಿದ್ದ ಅಕ್ರಮ-ಸಕ್ರಮ ಹಾಗೂ ಆರಾಧನಾ ಸಮಿತಿಗಳನ್ನು ಸ್ಥಗಿತಗೊಳಿಸಲಾಗಿತ್ತು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಕ್ರಮ-ಸಕ್ರಮ ಹಾಗೂ ಆರಾಧನಾ ಸಮಿತಿಗಳನ್ನು ರಚನೆಮಾಡುವ ಸಂಭಂಧ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯಲು ಕ್ರಮ ಮೈಗೊಳ್ಳಲಾಗಿದೆ. ಕೆಲವು ಪ್ರಸ್ತಾವನೆಗಳು ಈಗಾಗಲೇ ಬಂದಿದ್ದು ಇನ್ನೂ ಕೆಲವು ಪ್ರಸ್ತಾವನೆಗಳು ಬರಬೇಕಾಗಿದೆ. ಶೀಘ್ರವಾಗಿ ರಚಿಸಲಾಗುವುದು.

ಈ) ಆರಾಧನಾ ಸಮಿತಿಗಳನ್ನು ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ರಚಿಸಲಾಗಿರುತ್ತದೆ. ಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರನ್ನು ಸೇರಿಸಿ ಸಮಿತಿಯಲ್ಲಿ 8 ಜನರು ಇರುತ್ತಾರೆ. ಅಧಿಕಾರೇತರ 4 ಸದಸ್ಯರು ಹಾಗೂ 4 ಜನ ಅಧಿಕಾರಿಗಳು ಇರುತ್ತಾರೆ. ಅಧಿಕಾರೇತರ ಸದಸ್ಯರಲ್ಲಿ ಮಹಿಳೆ, ಪರಿಶಿಷ್ಟಜಾತಿ: ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದವರು ತಲಾ ಒಬ್ಬರು ಸದಸ್ಯರಿರುತ್ತಾರೆ.

ಅಕ್ರಮ ಸಕ್ರಮ ಸಮಿತಿಯಲ್ಲಿ ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 108ಇ ರನ್ವಯ ತಾಲ್ಲೂಕಿನ ಬಹುಭಾಗ ಪ್ರತಿನಿಧಿಸುವ ಚುನಾಯಿತ ವಿಧಾನ ಸಭೆ ಸದಸ್ಯರನ್ನು ಅಧ್ಯಕ್ಷರನ್ನಾಗಿ ತಾಲ್ಲೂಕಿನ ತಹಸೀಲ್ದಾರರನ್ನು ಸಮಿತಿಯ ಕಾರ್ಯದರ್ಶಿಯಾಗಿ ಇತರೆ 3 ಅಧಿಕಾರೇರತರ ಸದಸ್ಯರಲ್ಲಿ ಒಬ್ಬರು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ತಾಲ್ಲೂಕಿನಲ್ಲಿ ಅರ್ಜಿಗಳು ಹೆಚ್ಚಾಗಿದ್ದಲ್ಲಿ ನಿಯಮಾವಳಿ 108ಇ ರನ್ವಯ ಹೆಚ್ಚುವರಿ ಸಮಿತಿಯನ್ನು ಉಪ ವಿಭಾಗಾಧಿಕಾರಿಯನ್ನು ಅಧ್ಯಕ್ಷರನ್ನಾಗಿ ಸಂಬಂಧಿಸಿದ ತಹಸೀಲ್ದಾರರನ್ನು ಕಾರ್ಯದರ್ಶಿಯನ್ನಾಗಿ ಒಬ್ಬರು ಮಹಿಳಾ, ಒಬ್ಬರು ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಸದಸ್ಯರಾಗಿ ಒಬ್ಬರು ಸಾಮಾನ್ಯ ಸದಸ್ಯರನ್ನೊಳಗೊಂಡಂತೆ ರಚಿಸಲಾಗುತ್ತಿದೆ.

1042(1025) ಶ್ರೀ ಸಂಗಮೇಶ್ವರ ಬಿ.ಕೆ(ಭದ್ರಾವತಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭದ್ರಾಜಲಾಶಯ ಮತ್ತು ಗೊಂದಿ ಡ್ಯಾಂಗಳಲ್ಲಿ ಹೂಳು ತುಂಬಿರುವುದರಿಂದ ಜಲಾಶಯದ ಡ್ಯಾಂನ ನೀರು ಸಂಗ್ರಹಣಾ ಸಾಮರ್ಥ್ಯ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ:

ಆ) ಹೂಳೆತ್ತಲು ಪ್ರಸಕ್ತರ ಅಥವಾ ಹಿಂದಿನ ಸಾಲುಗಳಲ್ಲಿನ ಆಯವ್ಯಯದಲ್ಲಿ ಹಣವನ್ನು ಕಾದಿರಿಸಲಾಗಿದೆಯೇ;

ಇ) ಭದ್ರಾ ಎಡದಂಡೆ ನಾಲಾ, ಮುಖ್ಯ ನಾಲಾ ಮತ್ತು ಉಪನಾಲೆಗಳ ತೂಬು ಆಧುನೀಕರಣ ದುರಸ್ತಿಗಾಗಿ 2001–2002, 2002–2003, 2003–2004 ರಲ್ಲಿ ಮಾಡಲಾದ ವೆಚ್ಚವೆಷ್ಟು;

ಈ) ಈ ರೀತಿ ದುರಸ್ತಿ ಪಡಿಸಿದ ನಾಲೆಯ ಉದ್ದ ಎಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆ ಆಗುವ ಕುರಿತು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆ ಕೃಷ್ಣರಾಜಸಾಗರ ಇವರು ಸರ್ವೆ ಮಾಡಿದ್ದು ಸದರಿ ವರದಿಯಂತೆ ಹೊಳು ತುಂಬುವ ಪ್ರಮಾಣವು ಬಹಳ ಕಡಿಮೆ ಇರುತ್ತದೆ. ಈ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ. ಗೊಂದಿ ಡ್ಯಾಂ ಅಣೆಕಟ್ಟು ಆಗಿರುವುದರಿಂದ ಯಾವುದೇ ಸಂಗ್ರಹಣಾ ಸಾಮರ್ಥ್ಯವಿರುವುದಿಲ್ಲ.

ಆ) ನಿರ್ದಿಷ್ಟವಾಗಿ ಹಣವನ್ನು ಕಾಯ್ದಿರಿಸಿರುವುದಿಲ್ಲ.

ಇ) 2001–02,2002–03 ಹಾಗೂ 2003–04 ರ ಸಾಲಿನಲ್ಲಿ ಭದ್ರಾ ಆಧುನೀಕರಣ ಅಡಿಯಲ್ಲಿ ಭದ್ರಾ ಎಡದಂಡೆ ನಾಲಾ, ಮುಖ್ಯನಾಲಾ ಮತ್ತು ಉಪನಾಲೆಗಳ ತೂಬು ಆಧುನೀಕರಣ : ದುರಸ್ತಿಗಾಗಿ ಯಾವುದೇ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ಆದಾಗ್ಯೂ ಪ್ರತಿ ವರ್ಷ ನಾಲಾ ನಿರ್ವಹಣಾ ಅನುದಾನದಲ್ಲಿ ಅವಶ್ಯಕನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1043(1276) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಪಾಲಿಕೆಯ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರು ಯಾರ್ಯಾರು;

ಆ) ಈ ಪೈಕಿ ಜಲಮಂಡಳಿಯಿಂದ ಹಸ್ತಾಂತರಗೊಂಡ ಮಂದಿ ಯಾರ್ಯಾರು;(ಹುದ್ದೆವಾರು ವಿವರ ನೀಡುವುದು);

ಇ) ಮೈಸೂರು ನಗರದ ಸಮರ್ಪಕ ನೀರು ಸರಬರಾಜು ನಿರ್ವಹಣೆಗೆ ಅಗತ್ಯವಿರುವ ಸಿಬ್ಬಂದಿ ಎಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು ;

ಈ) ಮೈಸೂರು ನಗರ ಪಾಲಿಕೆ ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಗುತ್ತಿಗೆ ಕಾರ್ಮಿಕರಿಗೆ ಯಾವ ರೀತಿ ವೇತನ ಪಾವತಿಸಲಾಗುತ್ತಿದೆ ಹಾಗೂ ಜಲ ಮಂಡಳಿಯ ಅಧಿಕಾರ ಅವಧಿಯಲ್ಲಿ ಯಾವ ರೀತಿ ವೇತನ ಪಾವತಿಸಲಾಗುತ್ತಿತ್ತು;

ಉ) ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಇರುವ ಗುತ್ತಿಗೆ ಕಾರ್ಮಿಕರು ನಿರಂತರವಾಗಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಸದರಿಯವರಿಗೆ ಗುತ್ತಿಗೆದಾರರಿಂದ ವೇತನ, ಪಿ.ಎಫ್. ಮೊತ್ತದ ಹಂಚಿಕೆಯಲ್ಲಿ ವಂಚನೆ ಯಾಗುತ್ತಿರುವುದು ಸರ್ಕಾರದ ಅರಿವಿಗೆ ಬಂದಿದೆಯೇ :